‘ಟೈಗರ್ ಗಲ್ಲಿ’ ಸಿನಿಮಾ ರಾಜ್ಯೋತ್ಸವಕ್ಕೆ ಮುನ್ನುಡಿ ರೂಪದಲ್ಲಿ ತೆರೆಕಾಣುತ್ತಿದೆ. ಈ ‘ಗಲ್ಲಿ’ ಸಿನಿಮಾದ ಮೂಲಕ ನಟ ನೀನಾಸಂ ಸತೀಶ್ ದೊಡ್ಡ ಗೆಲುವು ಕಂಡುಕೊಳ್ಳುವ ತವಕದಲ್ಲಿದ್ದಾರೆ.

■ ರಘು



# ಸತೀಶ್‌ರ ‘ಗಲ್ಲಿ’ ಸಿನಿಮಾ!

ನೀನಾಸಂ ಸತೀಶ್ ಕನ್ನಡ ಚಿತ್ರರಂಗದ ಪ್ರತಿಭಾವಂತ ನಟರಲ್ಲೊಬ್ಬರು. ಪ್ರತಿಭೆ ಹಾಗೂ ಸೌಂದರ್ಯ ಎರಡೂ ಮೇಳೈಸಿದ ಅಪರೂಪದ ಕಲಾವಿದ ಸತೀಶ್.

ಹತ್ತು ವರ್ಷಗಳ ಹಿಂದೆ ರವಿ ಶ್ರೀವತ್ಸ ನಿರ್ದೇಶನದ ‘ಮಾದೇಶ’ ಚಿತ್ರದ ಪುಟ್ಟಪಾತ್ರವೊಂದರ ಮೂಲಕ ಗಾಂಧಿನಗರ ಪ್ರವೇಶಿಸಿದ ಸತೀಶ್, ದಶಕದ ಹಾದಿಯಲ್ಲಿ ಹಲವು ಸ್ಮರಣೀಯ ಪಾತ್ರಗಳಲ್ಲಿ ನಟಿಸಿದ್ದಾರೆ. ‘ಡ್ರಾಮಾ’, ‘ಲೂಸಿಯಾ’, ‘ಲವ್ ಇನ್ ಮಂಡ್ಯ’, ‘ಬ್ಯೂಟಿಫುಲ್ ಮನಸುಗಳು’ – ಈ ಚಿತ್ರಗಳೆಲ್ಲ ಸತೀಶ್‌ರೊಳಗಿನ ಕಲಾವಿದನನ್ನು ಅನಾವರಣಗೊಳಿಸುವ ಪಾತ್ರಗಳೇ ಆಗಿವೆ. ಗಡ್ಡ ವಿಜಿ ನಿರ್ದೇಶನದ ‘ದ್ಯಾವ್ರೇ’ ಚಿತ್ರದ ಪುಟ್ಟ ಪಾತ್ರದೊಳಗೆ ಸತೀಶ್ ಪ್ರಕಟಪಡಿಸಿದ ಹಲವು ಸಾಧ್ಯತೆಗಳು ಚಿತ್ರರಸಿಕರನ್ನು ಬೆರಗುಗೊಳಿಸುವಂತಿದ್ದವು.

ನಟನೆಯ ನಿಟ್ಟಿನಲ್ಲಿ ಏರು ದಾರಿಯಲ್ಲಿದ್ದ ಸತೀಶ್ ಎಡವಿದ್ದು ‘ರಾಕೆಟ್’ ಉಡಾವಣೆಯಲ್ಲಿ. ನಿರ್ಮಾಪಕನಾಗಿ ಸದಭಿರುಚಿಯ ಚಿತ್ರಗಳನ್ನು ರೂಪಿಸುವ ಹಂಬಲದಲ್ಲಿ ಅವರು ‘ರಾಕೆಟ್’ ರೂಪಿಸಿದರು. ಸಿನಿಮಾ ಗೆಲ್ಲಲಿಲ್ಲ. ಚಿತ್ರದಲ್ಲಿ ನಟನಾಗಿ ಗೆದ್ದ ಸತೀಶ್ ನಿರ್ಮಾಪಕನಾಗಿ ದಾರುಣ ಸೋಲು ಕಂಡಿದ್ದರು. ಇನ್ನೇನು ನೆಲಕಚ್ಚಿದರು ಅನ್ನುವಾಗ್ಗೆ, ಸತೀಶ್ ನಟನಾಗಿ ಮರಳಿದ ಬಗೆ ಅದ್ಭುತವಾಗಿತ್ತು. ಜಯತೀರ್ಥ ನಿರ್ದೇಶನದ ‘ಬ್ಯೂಟಿಫುಲ್ ಮನಸುಗಳು’ ಸಿನಿಮಾದ ಪಾತ್ರ ಅವರಿಗಾಗಿಯೇ ರೂಪಿಸಿದಂತಿತ್ತು. ತುಂಟಾಟ ಹಾಗೂ ಮಗುವಿನ ಮುಗ್ಧತೆಯನ್ನು ಒಟ್ಟಿಗೆ ಕಾಯ್ದುಕೊಳ್ಳುವ ಪಾತ್ರದಲ್ಲವರು ಜೀವಿಸಿದ್ದರು. ಚಿತ್ರದ ಶೀರ್ಷಿಕೆ ಕೂಡ ಕಲಾವಿದನಾಗಿ ಸತೀಶ್ ಪ್ರತಿಭೆಯನ್ನು ಸೂಚಿಸುವಂತಿತ್ತು.

ಸತೀಶ್ ಈಗ ‘ಟೈಗರ್ ಗಲ್ಲಿ’ ಸಿನಿಮಾದ ಮೂಲಕ ಮತ್ತೆ ಪ್ರೇಕ್ಷಕರ ಮುಂದೆ ನಿಂತಿದ್ದಾರೆ. ‘ಮಾದೇಶ’ದ ನಿರ್ದೇಶಕ ರವಿ ಶ್ರೀವತ್ಸ ಅವರು ‘ಟೈಗರ್ ಗಲ್ಲಿ’ ಮೂಲಕ ಸತೀಶ್‌ಗೆ ಹೊಸ ವರ್ಚಸ್ಸು ತಂದು ಕೊಡುವ ಪ್ರಯತ್ನದಲ್ಲಿದ್ದಾರೆ.

‘ಟೈಗರ್ ಗಲ್ಲಿ’ ನಿಜವಾದ ಅರ್ಥದಲ್ಲೂ ಗಲ್ಲಿ ಸಿನಿಮಾ! ಸತೀಶ್ ಹೇಳುವಂತೆ ‘ಮಾಸ್ ಸಿನಿಮಾ’. ಅಂದರೆ, ಪೂರ್ಣ ಪ್ರಮಾಣದ ಕಮರ್ಷಿಯಲ್ ಸಿನಿಮಾ. ಈ ಸಿನಿಮಾದ ಮೂಲಕ ದೊಡ್ಡ ಗೆಲುವು ಕಾಣುವ ಹಂಬಲ ಅವರದು. ಕಾಮಿಡಿ ಮತ್ತು ಪ್ರೇಮಕಥೆಗಳ ನಾಯಕನಾಗಿ ಮಿಂಚಿರುವ ಅವರು, ಸಾಹಸ ಪ್ರಧಾನ ಪಾತ್ರವೊಂದಕ್ಕೆ ತಮ್ಮನ್ನು ಒಡ್ಡಿಕೊಂಡಿದ್ದಾರೆ. ಸತೀಶ್ ದ್ವಿಪಾತ್ರದಲ್ಲಿ ನಟಿಸಿರುವುದು ಸಿನಿಮಾದ ಮತ್ತೊಂದು ವಿಶೇಷ.

ಭೂಗತಲೋಕದ ಕಥೆಗಳನ್ನು ನಿರೂಪಿಸುವಲ್ಲಿ ರವಿ ಶ್ರೀವತ್ಸ ಪಳಗಿದ ನಿರ್ದೇಶಕ. ಮನುಷ್ಯನ ವ್ಯಕ್ತಿತ್ವದ ಭಾಗವೇ ಆಗಿರುವ ಒರಟುತನ, ಹಿಂಸೆ, ಕ್ರೌರ್ಯಗಳನ್ನು ಶೋಧಿಸುವಲ್ಲಿ ಅವರಿಗೆ ಆಸಕ್ತಿ. ‘ಟೈಗರ್ ಗಲ್ಲಿ’ ಚಿತ್ರದಲ್ಲಿ ಕೂಡ ಅವರ ಛಾಯೆ ಮುಂದುವರೆದಿದ್ದರೂ, ನಿರೂಪಣೆಯಲ್ಲಿ ಮಾಗಿದ ಮನಸ್ಸೊಂದನ್ನು ಕಾಣಬಹುದಂತೆ. ಅಂದರೆ, ಕಥೆಯಲ್ಲಿ ಸಾಕಷ್ಟು ಭಾವೋತ್ಕರ್ಷವನ್ನೂ ರವಿ ಅಳವಡಿಸಿದ್ದಾರಂತೆ.

ಎನ್. ಕುಮಾರ್ ಚಿತ್ರದ ನಿರ್ಮಾಪಕರು. ಅವರ ಪುತ್ರ ಯೋಗೇಶ್ ಕುಮಾರ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸುವ ಮೂಲಕ ‘ಗಲ್ಲಿ’ ಬಳಗ ಸೇರಿಕೊಂಡಿದ್ದಾರೆ. ಭಾವನಾ ರಾವ್ ಮತ್ತು ರೋಶನಿ ಚಿತ್ರದ ನಾಯಕಿಯರು. ಪೂಜಾ ಲೋಕೇಶ್ ನ್ಯಾಯಾಧೀಶೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಿರ್ದೇಶಕರಾಗಿ ಪ್ರಸಿದ್ಧರಾದ ಶಿವಮಣಿ,. ಗಿರಿರಾಜ್, ಅಯ್ಯಪ್ಪ ಶರ್ಮ ಮುಂತಾದವರು ಕಲಾವಿದರಾಗಿ ನಟಿಸಿರುವುದು ಸಿನಿಮಾದ ಮತ್ತೊಂದು ವಿಶೇಷ. ‘ಟೈಗರ್ ಗಲ್ಲಿ’ ಚಿತ್ರಕ್ಕೆ ಶ್ರೀಧರ್ ಸಂಭ್ರಮ್ ಸಂಗೀತ ಹಾಗೂ ಮ್ಯಾಥ್ಯೂ ರಾಜನ್ ಛಾಯಾಗ್ರಹಣವಿದೆ.

ಕನ್ನಡ ಚಿತ್ರಗಳ ಜೊತೆಗೆ ಪರಭಾಷಾ ಚಿತ್ರಗಳತ್ತಲೂ ಸತೀಶ್ ಕಣ್ಣರಳಿಸಿರುವ ಸಮಯವಿದು. ಈ ಸಂದರ್ಭದಲ್ಲಿ ‘ಗಲ್ಲಿ’ ಸಿನಿಮಾ ಗೆದ್ದಲ್ಲಿ (ಅ. 27ರಂದು ತೆರೆಗೆ) ನಟನಾಗಿ ಸತೀಶ್‌ರ ಆತ್ಮವಿಶ್ವಾಸ ಮತ್ತಷ್ಟು ಹೆಚ್ಚಬಹುದು. ■